**ದಿನಾಂಕಃ 22-06-2026 ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಸಿ.ವಿ ವಕೀಲರಿಂದಃ**

ಘಟನಾ ಸ್ಥಳವು ಐ.ಬಿ ಸರ್ಕಲ್ ನಿಂದ ಬಸ್ ನಿಲ್ದಾಣ, ಕೋಡಿ ಸರ್ಕಲ್ ಆದ ನಂತರ ಬರುತ್ತದೆ ಎಂದರೆ ಸರಿ. ಐ.ಬಿ ಸರ್ಕಲ್ ನಿಂದ ಸದರಿ ಸ್ಥಳವು ಸುಮಾರು 5 ರಿಂದ 6 ಕಿ.ಮೀ ದೂರದಲ್ಲಿದೆ ಎಂದರೆ ಸರಿ. ಘಟನಾ ಸ್ಥಳದ ಹಿಂಭಾಗದಲ್ಲಿ ಅಂದರೆ ತಿಪಟೂರು ಕಡೆಯ ಮಾರ್ಗದಲ್ಲಿ ತಿರುವು ಇದ್ದು ನಂತರ ಘಟನಾ ಸ್ಥಳದ ಮುಂಭಾಗದಲ್ಲಿ 3 ರಸ್ತೆ ಸೇರುವ ಕೂಡು ರಸ್ತೆ ಇದೆ ಎಂದರೆ ಸರಿ. ಕೂಡು ರಸ್ತೆಯ ಮುಂದೆ ಮತ್ತು ಹಿಂಭಾಗದಲ್ಲಿ ರಸ್ತೆ ಉಬ್ಬು ಇದೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ರಸ್ತೆಯ ಮಧ್ಯಭಾಗದಲ್ಲಿ ರಸ್ತೆ ವಿಭಜಕ ಇದೆ ಎಂದರೆ ಅಪಘಾತ ಆದ ಸಮಯದಲ್ಲಿ ಇರಲಿಲ್ಲ. ರಸ್ತೆಯ ಎರಡೂ ಬದಿಯಲ್ಲಿ ಕಾರ್ ಶೋ ರೂಮ್, ಟ್ರಾಕ್ಟರ್ ಶೋ ರೂಮ್, ವಾಹನ ಬಿಡಿ ಭಾಗಗಳ ಅಂಗಡಿ ಇದೆ ಎಂದರೆ ಸರಿ. ಸದರಿ ಸಮಯದಲ್ಲಿ ರಸ್ತೆ ಹಾಳಾಗಿದ್ದು ರಸ್ತೆಯಲ್ಲಿ ಗುಂಡಿಗಳು ಇದ್ದವು ಎಂದರೆ ಸರಿ. ಅಪಘಾತವಾದ ಸ್ಥಳಕ್ಕೆ ನಾನು ಹೋದಾಗ ಅಲ್ಲಿ ಸುಮಾರು 10 ಜನ ಸೇರಿದ್ದರು.

ಈ ಅಪಘಾತದ ಮೃತ ವಿನಯ್ ಅಥವಾ ಚಾಸಾ-1 ನನಗೆ ಪರಿಚಯಸ್ಥರಲ್ಲ. ನಾನು ಸ್ಥಳಕ್ಕೆ ಹೋದಾಗ ಲೈಟ್ ಕಂಬ ಮೃತನ ಮೇಲೆ ಬಿದ್ದಿತ್ತು. ನಾನು ಸ್ಥಳದಲ್ಲಿ 15-20 ನಿಮಿಷ ಇದ್ದೆ. ನಂತರ ನನ್ನ ಕಾರಿನಲ್ಲಿಯೇ ಅಪಘಾತವಾಗಿದ ವ್ಯಕ್ತಿಯನ್ನು ಚಾಸಾ-1 ರವರೊಂದಿಗೆ ಕರೆದುಕೊಂಡು ಹೋಗಿ ಆಸ್ಪತ್ರೆಗೆ ಬಿಟ್ಟಿರುತ್ತೇನೆ. ಆಸ್ಪತ್ರೆಯಲ್ಲಿ ನಾನು ಅಪಘಾತ ಯಾರಿಂದ ಆಯಿತು ಎಂದು ಹೇಳಿರುವುದಿಲ್ಲ. ಸದರಿ ದಿನದಂದು ಪೊಲೀಸ್ ಠಾಣೆಯಲ್ಲಿ ನಾನು ಯಾವುದೇ ಹೇಳಿಕೆ ನೀಡಿಲ್ಲ. ಪೊಲೀಸರು ನನಗೆ ಯಾವುದೇ ನೋಟೀಸ್ ನೀಡಿರಲಿಲ್ಲ. ಆರೋಪಿಯನ್ನು ಇದೇ ಪ್ರಥಮ ಬಾರಿಗೆ ನ್ಯಾಯಾಲಯಕದಲ್ಲಿ ನೋಡಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ನೋಡಿದ್ದೇನೆ. ಅಪಘಾತ ಸ್ಥಳವು ಹೆಚ್ಚಿನ ಜನಸಂದಣಿ ಮತ್ತು ವಾಹನ ಸಾಂದ್ರತೆ ಇರುವ ಸ್ಥಳ ಎಂದರೆ ಆ ದಿನ ಸ್ವಲ್ಪ ಕಮ್ಮಿ ಇತ್ತು ಎಂದು ಸಾಕ್ಷಿಯು

ನುಡಿಯುತ್ತಾರೆ. ನಾನು ಪೊಲೀಸರಿಗೆ **17** ನೇ ತಾರೀಖು ಹೇಳಿಕೆ ನೀಡಿದ್ದೇನೆ. ನಾನು ನನ್ನ ಹೇಳಿಕೆಯಲ್ಲಿ ಅಪಘಾತವು ರಸ್ತೆಯ ಯಾವ ಭಾಗದಲ್ಲಿ ಅಗಿದೆ ಎಂದು ನಿಖರವಾಗಿ ಹೇಳಿಲ್ಲ ಎಂದರೆ ಸಾಕ್ಷಿಯು ನಾನು ಏನು ನೋಡಿದ್ದೇನೆ ಅದನ್ನು ಪೊಲಿಸೀರಿಗೆ ಹೇಳಿದ್ದೇನೆ ಎಂದು ನುಡಿಯುತ್ತಾರೆ. ಅಪಘಾತವಾಗಿದ್ದ ವ್ಯಕ್ತಿಯ ಹೆಸರು ಸ್ಥಳದಲ್ಲಿ ನನಗೆ ಗೊತ್ತಾಗಲಿಲ್ಲ ಆಸ್ಪತ್ರೆಯಲ್ಲಿ ಗೊತ್ತಾಯಿತು. ನನ್ನ ಕಾರಿನ ಸಂಖ್ಯೆ ಎಲ್ಲಿಯೂ ನಮೂದಿಸಿಲ್ಲ.

ನಾನು ಆರೋಪಿಯನ್ನು ಈ ಹಿಂದೆ ನೋಡಿಯೇ ಇಲ್ಲ ಎಂದರೆ ಸರಿಯಲ್ಲ. ನಾನು ಹೋಗುತ್ತಿದ್ದಾಗ ಒಂದು ಕಾರು ವೇಗವಾಗಿ ಹೋಗುತ್ತ ನನ್ನ ಮುಂದೆ ಹೋಗುತ್ತಿದ್ದ ಮೃತ ವಿನಯ್ ನಿಗೆ ಢಿಕ್ಕಿ ಪಡಿಸಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆರೋಪಿಯ ಹೆಸರು ಗೊತ್ತಿರಲಿಲ್ಲ, ಆರೋಪಿಯನ್ನು ನ್ಯಾಯಾಲಯದಲ್ಲಿ ಮೊದಲ ಬಾರಿಗೆ ನೋಡಿದೆ ಎಂದರೆ ಸರಿಯಲ್ಲ. ಮೃತ ವಿನಯ್ ನ ಬಳಿ ಡಿ.ಎಲ್ ಇರಲಿಲ್ಲ ಮತ್ತು ವಾಹನದ ವಿಮೆ ಇಲ್ಲದಿದ್ದರೂ ಚಾಸಾ-**6** ಮತ್ತು ಪೊಲೀಸರೊಂದಿಗೆ ಶೆರಿಕ್ ಆಗಿ ಮೃತ ವಿನಯನ ಕುಟುಂಬಕ್ಕೆ ಪರಿಹಾರ ದೊರಕಲಿ ಎಂಬ ದುರುದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಲ್ಲ ನೀಡಿಲ್ಲ ಎಂದರೆ ಸರಿಯಲ್ಲ. ಮೃತನ ಸಾವಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕೂಡು ರಸ್ತೆಯ ತಿಪಟೂರು ಕಡೆಯಿಂದ ಬೆಂಗಳೂರು ಕಡೆಗೆ ಹೋಗುವಾಗ ರಸ್ತೆ ಉಬ್ಬು ಇದೆ ಎನ್ನುವುದು ಸರಿ. ರೇಣುಕಾ ಡಾಬಾ ಆದ ನಂತರ ಒಂದು ರಸ್ತೆ ಉಬ್ಬು ಇದೆ ಎಂದರೆ ನಾನು ಗಮನಿಸಿಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

(ವರದರಾಜ್ ಬಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.